## (೩) ರೈತರ ಭೂಮಿಯನ್ನು ಪಾಲು ಪಟ್ಟಿಯನ್ನು ಮಾಡಿಕೊಡಲು ಗ್ರಾಮ ಲೆಕ್ಕಿಗರಿಗೆ ಅಧಿಕಾರ ನೀಡುವುದು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ರೈತರು ತಮ್ಮ ಭೂಮಿ ಪಾಲುಪಟ್ಟಿ ಮಾಡಿಕೊಳ್ಳಬೇಕಾದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸ್ಟ್ಯಾಂಪ್ ಡ್ಯೂಟಿ ತುಂಬಿ ಪಾಲು ಪಟ್ಟಿ ಮಾಡಿಕೊಳ್ಳಬೇಕೆಂದು ಕಾನೂನು ಮಾಡಲಾಗಿದೆ. ದುಡ್ಡು ಇಲ್ಲದ ಬಡ ರೈತರು ತಮ್ಮ ಆಸ್ತಿ ಪಾಲುಪಟ್ಟಿ ಮಾಡಿಕೊಂಡು ನೆಮ್ಮದಿಯಿಂದ ಬದುಕುವ ಅವರ ಸ್ವತಂತ್ರವನ್ನೇ ಕಸಿದುಕೊಳ್ಳುವುದು ಅನ್ಯಾಯವಾಗಿದೆ. ಕೂಡಲೇ ಮೊದಲಿನಂತೆ ತಲಾಟಿ ಅಥವಾ ವಿಲೇಜ್ ಅಕೌಂಟೆಂಟ್‌ಗೆ ವರದಿ ಕೊಟ್ಟು ಪಾಲು ಮಾಡಿಕೊಳ್ಳಲು ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ರೈತರು ತಮ್ಮ ಭೂಮಿಯನ್ನು ಪಾಲುಪಟ್ಟಿ ಮಾಡಿಕೊಳ್ಳಬೇಕಾದಲ್ಲಿ ನೋಂದಣಿ ಕಾಯ್ದೆಯ ಪ್ರಕರಣ ೧೭(೧) ಎ ಯಿಂದ ಇ ವರೆಗೆ ಬರುವ ಪತ್ರಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕಾಗಿರುತ್ತದೆ. ಉಪ ನೋಂದಣಿ ಕಛೇರಿಯಲ್ಲಿ ಪಾಲುಪತ್ರವನ್ನು ನೋಂದಣಿ ಮಾಡಿಕೊಳ್ಳುವಂತೆ ಸರ್ಕಾರದಿಂದ ಯಾವುದೇ ನಿರ್ದಿಷ್ಟ ಆದೇಶ ನೀಡಿರುವುದಿಲ್ಲ. ನೋಂದಣಿ ನಿಯಮ ೧೭(೨) (೮) ಪ್ರಕಾರ ಕಂದಾಯ ಅಧಿಕಾರಿಗಳು ಮಾಡುವ ಪಾಲು ವಿಭಾಗ ಪತ್ರಕ್ಕೆ ನಿಯಮ (೧೭) (೧) (ಬ) ಅನ್ವಯಿಸುವುದಿಲ್ಲ.

ರೈತರು ಜಮೀನನ್ನು ರೆವಿನ್ಯೂ ಸೆಟಲ್‌ಮೆಂಟ್ ಮಾಡಿಕೊಳ್ಳುವುದಾದರೆ ವಾರ್ಷಿಕ ಕಂದಾಯದ ೨೫ ರಷ್ಟಕ್ಕೆ ಮುದ್ರಾಂಕ ಶುಲ್ಕ ತೆರಬೇಕಾಗುತ್ತದೆ.

## (೪) ಮೂಡಿಗೆರೆ ತಾಲ್ಲೂಕು ಗೌತಹಳ್ಳಿ ಹತ್ತಿರ ಹರಿಯುವ ಹಳ್ಳಕ್ಕೆ ಅಣೆಕಟ್ಟು ಕಟ್ಟುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಮಾಕೋನಹಳ್ಳಿ ಮಂಡಲ ಪಂಚಾಯ್ತಿಗೆ ಸೇರಿದ ಗೌತಹಳ್ಳಿ ಗ್ರಾಮದ ಪಕ್ಕದಲ್ಲಿ ಹರಿಯುವ ಹಳ್ಳಕ್ಕೆ ಅಣೆಕಟ್ಟು ಕಟ್ಟುವ ಬೇಡಿಕೆ ಬಹಳ ವರ್ಷಗಳಿಂದಿರುತ್ತದೆ. ಈ ಅಣೆಕಟ್ಟಿನಿಂದ ನೂರಾರು ಬಡ ರೈತರಿಗೆ ಸುಮಾರು ೫೦೦ ಎಕರೆ ಮೇಲ್ಪಟ್ಟು ಜಮೀನಿಗೆ ನೀರಾವರಿ ಒದಗಿಸಲಾಗುತ್ತದೆ. ಆದುದರಿಂದ ಗೌತಹಳ್ಳಿಗೆ ಈ ಅಣೆಕಟ್ಟನ್ನು ಕೂಡಲೇ ಮಂಜೂರು ಮಾಡಿಕೊಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮೂಡಿಗೆರೆ ತಾಲ್ಲೂಕಿನ ಗೌತಹಳ್ಳಿ ಹಳ್ಳಕ್ಕೆ ಅಣೆಕಟ್ಟುವುದರ ಬೇಡಿಕೆ ಬಗ್ಗೆ ಇದುವರೆಗೂ ಗಮನಕ್ಕೆ ಬಂದಿರುವುದಿಲ್ಲ.

ಈ ವಿಷಯದ ಬಗ್ಗೆ ಪೂರ್ವಭಾವಿ ವರದಿಯನ್ನು ತಯಾರಿಸಿ ವರದಿಯನ್ನು ಸಲ್ಲಿಸಲು ಈಗ ಸಣ್ಣ ನೀರಾವರಿ ಮುಖ್ಯ ಇಂಜಿನಿಯರ್‌ರವರು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಹಾಸನರವರಿಗೆ ಸೂಚನೆ ನೀಡಿರುತ್ತಾರೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

## (೫) ಜನಾರೋಗ್ಯ ಇಲಾಖೆಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡುವ ಬಗ್ಗೆ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಜನಾರೋಗ್ಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದೆ ಇರುವುದರಿಂದ ಕೊಳವೆ ಬಾವಿ ಕೊರೆಯುವ ಇಲಾಖೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ಸಾಕಷ್ಟು ನೌಕರರು ಒಂದೇ ಹುದ್ದೆಯಲ್ಲಿ ೩೫-೩೪ ವರ್ಷ ಇಲಾಖೆಯಲ್ಲಿ ಕೆಲಸ ಮಾಡಿ ಅದೇ ಹುದ್ದೆಯಲ್ಲಿ ಯಾವುದೇ ಬಡ್ತಿಯಿಲ್ಲದೆ ನಿವೃತ್ತಿ ಹೊಂದಿದ್ದಾರೆ. ಈ ಹಿಂದೆ ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಕೊಟ್ಟಿದ್ದು ಸರ್ಕಾರ ಆದಷ್ಟು ಬೇಗ ಜನಾರೋಗ್ಯ ಶಿಲ್ಪ ಕಾರ್ಯ ವಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡಿಸಿಕೊಡಬೇಕೆಂದು ಇಲಾಖೆಯವರು ಭರವಸೆ ಕೊಟ್ಟಿದ್ದಾರೆ. ಅಲ್ಲದೆ ಕಳೆದ ಜುಲೈ ಅಧಿವೇಶನದಲ್ಲಿಯೂ ಸಹ ಅಂದಿನ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ವಿಧಾನ